**2**

ಮಕ್ಕಳ ಜಗತ್ತು ದೊಡ್ಡವರ ಜಗತ್ತಿನಂತೆ ಸಂಕೀರ್ಣವಲ್ಲ. ಅವರದ್ದು ಸಹಜ, ಸರಳ, ಮುಗ್ಧ ದೃಷ್ಟಿ. ಕಥೆ, ಕವನ, ನಾಟಕ ಏನೇ ಇರಲಿ – ಮಕ್ಕಳಿಗೆ ಹೇಳುವುದರಲ್ಲೇ ಹೆಚ್ಚಿನ ಸ್ವಾರಸ್ಯವಿರುತ್ತದೆ. ಮಕ್ಕಳದ್ದು ಕುತೂಹಲದ ಕಣ್ಣು. ಕುತೂಹಲ ಇದ್ದ ಕಡೆ ಕಥೆ–ಕವನ ಹೇಳುವುದೂ ಇಷ್ಟವೇ. ನನ್ನ ತಾಜಾ ಅನುಭವದಂತೆ ಸುತ್ತ ಮಕ್ಕಳನ್ನು ಸೇರಿಸಿಕೊಂಡು ಹೇಳುವ ಸ್ವಾರಸ್ಯವೇ ಬೇರೆ. ಕಥೆಗಳನ್ನೋ ಕಾದಂಬರಿಯನ್ನೋ ಮಕ್ಕಳು ಕಣ್ಣು ಅರಳಿಸುತ್ತ ಆಸ್ವಾದಿಸಿದರೆ, ಹಾಡುಗಳನ್ನು ಹಾಡಿ ಕುಣಿದರೆ ಅದಕ್ಕಿಂತ ದೊಡ್ಡ ಸಂತೋಷ ಬೇರೆ ಇಲ್ಲ.

**3**

ಹೌದು, ಕಥೆ–ಕವನಗಳನ್ನು ಓದುವ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಇದಕ್ಕೆ ಕಾರಣ ಮೊಬೈಲ್, ಟೀವಿ ಮುಂತಾದವುಗಳ ಗೀಳು. ನಾವು ತಿಳಿದಿರಬೇಕಾದ ಅಂಶವೆಂದರೆ, ಮಕ್ಕಳು ಏನನ್ನೇ ಆದರೂ 'ಆರಿಸಲು' ಅಸಮರ್ಥರು. ಸಾಹಿತ್ಯದ ವಾತಾವರಣ ಮನೆ ಹಾಗೂ ಶಾಲೆಗಳಲ್ಲಿ ಇದ್ದರೆ ಸಹಜವಾಗಿ ಮಕ್ಕಳಲ್ಲೂ ಓದುವ ಆಸಕ್ತಿ ಬೆಳೆಯುತ್ತದೆ. ಮಕ್ಕಳ ಮಾನಸಿಕ ಹಾಗೂ ಶಾರೀರಿಕ ಆರೋಗ್ಯಕ್ಕೆ ಸಾಹಿತ್ಯ ಸಹಕಾರಿಯೇ ಹೊರತು ಮೊಬೈಲ್, ಟೀವಿಗಳು ಅಲ್ಲ ಎಂಬ ಸತ್ಯ ಮೊದಲು ತಿಳಿದಿರಬೇಕಾದದ್ದು ಹಿರಿಯರೇ. ಸಾಹಿತ್ಯ ಪ್ರೀತಿಯ ವಾತಾವರಣ ಇರುವ ಮನೆಗಳು, ಶಾಲೆಗಳು ಇನ್ನೂ ಅಲ್ಲಲ್ಲಿ ಇವೆ ಅನ್ನುವುದೇ ಸಂತೋಷದ ವಿಷಯ. ಮಕ್ಕಳ ಸಾಹಿತ್ಯವನ್ನು ಆಸ್ವಾದಿಸುವ ಒಂದು ವರ್ಗ ಕಿರಿಯರಲ್ಲೂ ಹಿರಿಯರಲ್ಲೂ ಇನ್ನೂ ಇದೆ ಅನ್ನುವುದೇ ನನ್ನಲ್ಲಿ ಬರೆಯುವ ಉತ್ಸಾಹವನ್ನು ಉಳಿಸಿರುವ ಅಂಶ.

**4**

ಕಲೆ, ಸಾಹಿತ್ಯ ಮಕ್ಕಳಿಗೆ ಹತ್ತಿರವಾಗುವುದು, ಓದುವ ಉತ್ಸಾಹ ಕೊಡುವುದು ಅದು ಅವರಿಗೆ ಕೊಡುವ ಸಂತೋಷದಿಂದ. ಮಕ್ಕಳದ್ದು ಪಕ್ವವಾಗದ ಮುಗ್ಧ ಮನಸ್ಸು. ಮಕ್ಕಳಿಗಾಗಿ ಸಾಹಿತ್ಯ ರಚಿಸುವಾಗ ಅಲ್ಲಿ ಭಾಷಾ ಪ್ರೌಢಿಮೆ ಇಣುಕಲೇಬಾರದು. ಮಕ್ಕಳ



ನಿರ್ಮಲಾ ಸುರತ್ಕಲ್ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ನಿಡ್ಪುರ ಗ್ರಾಮದವರು. ವಸತಿ ನಿಲಯದ ಪಾಲಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಕ್ಕಳೊಂದಿಗೆ ಒಡನಾಟ, ಮಕ್ಕಳಿಗಾಗಿ ಬರವಣಿಗೆ. 'ಪಾತರಗಿತ್ತಿ ಪಕ್ಕಾ', 'ಅ..ಆ..ಇ..ಈ..ಉ..ಊ..', 'ಪುಟ್ಟಪುಟ್ಟಿ ಗುಟ್ಟಾಗಿ', 'ಸಕ್ರೆ ಮೂಟೇ ಯಾರಿಗ್ಬೇಕೂ...?', 'ಚೀಂ ಚೀಂ ಚಿಕ್ಕ ಗುಬ್ಬಿ' ಮಕ್ಕಳಿಗಾಗಿ ಬರೆದಿರುವ ಕವನ ಸಂಕಲನಗಳು. 'ಶ್ರಮಯೇವ ಜಯತೆ' ಮಕ್ಕಳ ಕಾದಂಬರಿ. ಬಾಲವಿಕಾಸ ಅಕಾಡೆಮಿಯ 'ಮಕ್ಕಳ ಚಂದಿರ ಪ್ರಶಸ್ತಿ', ಪುತ್ತೂರಿನ 'ಬೋಳಂತಕೋಡಿ ಕನ್ನಡ ಪ್ರಶಸ್ತಿ', 'ಡಿಸೋಜಾ–ಎಚ್.ಎಸ್.ವಿ ಪುಟಾಣಿ ಸಾಹಿತ್ಯ ಪುರಸ್ಕಾರ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳಿಗೆ ಭಾಜನರು.